ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ
*ಮರಳು ಮತ್ತು ಮರುಳು; ಇವೆರಡರ ನಡುವಿನ ವ್ಯತ್ಯಾಸವೇನು?*



ಮರಳಿನಿಂದ ಗಾಜು ಉತ್ಪಾದನೆ; ಗಾಜಿನಿಂದ ಲೋಟ; ಲೋಟದಿಂದ ಡ್ರಿಂಕ್ಸ್, ಡ್ರಿಂಕ್ಸ್‌ನಿಂದ ಮರುಳು!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ರಾಮ, ಕೃಷ್ಣರ ಆಹಾರ ಪದ್ಧತಿಯ ಬಗ್ಗೆ ಟೀಕೆ ಮಾಡುವವರು ಅವರ ಆದರ್ಶಗಳನ್ನು ಏಕೆ ಆಚರಿಸುವುದಿಲ್ಲ?*
ಭಕ್ತಿ ತೋರಿದರೆ ದೊರಕುವುದಕ್ಕಿಂತ ಬತ್ತಿ ಇಟ್ಟರೆ ಹೆಚ್ಚು ಪದವಿ, ಪ್ರಶಸ್ತಿಗಳು ದೊರೆಯುವುದರಿಂದ.

ಎಸ್.ಎನ್.ಮಹಾಬಲರಾವ್, ನರಸಿಂಹರಾಜಪುರ
*ಸೃಷ್ಟಿಕರ್ತನ ಆರಾಧನೆ ಬಿಟ್ಟು ಸೃಷ್ಟಿಗಳ ಆರಾಧನೆ ಏಕೆ?*
ಕಾಣದ ಮಲ್ಲಿಕಾರ್ಜುನನಿಗಿಂತ ಕಾಣುವ ಮಲ್ಲಿಕಾ ಶೆರಾವತ್ ಕಣ್ಮನ ಸೆಳೆಯುವುದರಿಂದ.

ರಾಜೀವ್ ಎನ್. ಮಾಗಲ್, ಸಕಲೇಶಪುರ
*ಸ್ವಾಮಿ, ವಿಧಾನಸೌಧದ ಬುಡದಲ್ಲಿ ರಾಜಕಾಲುವೆ ಹಾದುಹೋಗಿದೆಯಂತೆ?*



ಬುಡದಲ್ಲಲ್ಲ; ಮೇಲೆಯೇ. ರಾಜಕಾಲುವೆಯಲ್ಲ; ಲಂಚದ ರಾಡಿಕಾಲುವೆ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
*ದುಡಿಯಲು ಶಕ್ತಿಯಿಲ್ಲದವನಿಗೆ ಪ್ರೀತಿಸುವ ಹಕ್ಕು ಇಲ್ಲವಂತೆ. ನಿಜವಾ ಸಾರ್?*
ಹಕ್ಕು ಇದ್ದೀತು, ಆದರೆ ಹಕ್ಕಿಯೇ ಇರಲ್ಲ!

ಶೀಲಾ ಸತ್ಯೇಂದ್ರಸ್ವಾಮಿ, ಹರವೆ
*ದಶರಥನ ಮೂವರು ರಾಣಿಯರಲ್ಲಿ ಕೌಸಲ್ಯೆ ಪಟ್ಟದರಸಿ, ಕೈಕೇಯಿ ಹೃದಯದರಸಿ. ಸುಮಿತ್ರೆ?*
ಇಬ್ಬರೂ ಮುನಿದಾಗ ನೆಮ್ಮದಿ ಅರಸುತ್ತಿದ್ದ ಅರಸು ಅರಸುತ್ತಿದ್ದ ಅರಸಿ.

ಬೋ.ಪಾ. ವೆಂಕಟೇಶ್, ಸಮೇತನಹಳ್ಳಿ
*ಸಾಧು ಸಜ್ಜನರನ್ನು ನಾವು ಹೇಗೆ ಗುರುತಿಸಬಹುದು?*
ಸರ್ಕಾರದ ಸವಲತ್ತು, ಪ್ರಶಸ್ತಿಗಳ ಪಟ್ಟಿಯಲ್ಲಿ ಅವರ ಹೆಸರಿದೆಯೇ ಎಂದು ನೋಡಿ. ಇಲ್ಲದಿದ್ದರೆ ಸಜ್ಜನರು.

ಎಸ್. ಕುಮಾರಸ್ವಾಮಿ, ಚಿಕ್ಕಬಳ್ಳಾಪುರ
*ಗುಂಡಿನ ಮತ್ತೇ ಗಮ್ಮತ್ತು. ಹೆಣ್ಣಿನ ಮತ್ತು?*
ಕಿಮ್ಮತ್ತಿಗೆ ಆಪತ್ತು, ವಿಪತ್ತು.

ಮಾಲತಿ ರಾಜು, ಬೆಂಗಳೂರು
*ಗಂಡಸಿನ ಚಟ, ಹೆಂಗಸಿನ ಹಠ. ಇದರ ಪರಿಣಾಮ ಏನಾಗಬಹುದು?*
ವೈದ್ಯರ, ವಕೀಲರ ಮನೆಗಳು ಉದ್ಧಾರವಾಗಬಹುದು.

ಫಾಲನೇತ್ರ ಸಜ್ಜನ, ಶಿರಸಿ
*ಯುಕ್ತಿ ಹೇಗಿರಬೇಕು?*
ಶಕ್ತಿ ನಾಚುವಂತೆ.

ರತ್ನಜ, ಮೈಸೂರು
*ನಿಮ್ಮ ಕೆಲವು ಉತ್ತರಗಳನ್ನು ಗಮನಿಸಿದರೆ ನೀವು ನೆಗೆಟಿವ್ ಥಿಂಕರ್ ಎನಿಸುತ್ತಿದೆ. ಏನಂತೀರಿ?*
ಅದೇನೋ ತಿಳಿಯದು ಸಾರ್. ನಾನು ನಿಮ್ಮ ಕನ್ನಡಿಯಷ್ಟೆ.

ಟಿ.ಆರ್. ರವೀಂದ್ರ, ಬೆಂಗಳೂರು
*ಹುಟ್ಟುವುದಕ್ಕೆ ಮುಂಚೆ ಮನುಷ್ಯ ಏನಾಗಿರುತ್ತಾನೆ? ಸತ್ತನಂತರ ಮನುಷ್ಯ ಏನಾಗುತ್ತಾನೆ?*
ಭ್ರೂಣ, ಗೌಣ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
*ಹೆಂಗಸರು ದ್ರೌಪದಿಯನ್ನು ಆದರ್ಶವಾಗಿ ತೆಗೆದುಕೊಂಡರೆ?*
ಗಂಡಸರು ಅರ್ಜುನರಾಗಿ ಊರೆಲ್ಲ ಪತ್ನಿಯರನ್ನು ಹೊಂದುತ್ತಾರೆ.

ಎ.ಪಿ. ರಂಗನಾಥ್, ಮೈಸೂರು
*ವಿದ್ಯೆಗೂ, ಬುದ್ಧಿಗೂ ವ್ಯತ್ಯಾಸವಿದೆಯೆ?*
ಇದೆ. ಬುದ್ಧಿ ಹಾರ್ಡ್ ಡಿಸ್ಕ್; ವಿದ್ಯೆ ಕಂಪ್ಯೂಟರ್ ಮಾನಿಟರ್.

## ಬಹುಮಾನಿತ ಪ್ರಶ್ನೆ

ಆರ್. ಮಧುಸೂದನ್, ಹಾಸನ
ಮದುವೆ ಗಂಡಿಗೆ ಪೇಟ ಹಾಕುತ್ತಾರೆ. ಮದುವೆ ಹೆಣ್ಣಿಗೆ ಪೇಟ ಹಾಕುವುದಿಲ್ಲ. ಏಕೆ ರಾಮ್?
ಮದುವೆಯ ನಂತರ ಯಾರು ಬೋಳಿಸಿಕೊಳ್ಳುತ್ತಾರೋ ಅವರಿಗೆ ತೊಡಿಸುವುದೇ ಸೂಕ್ತವೆಂದು.

ಕೆ.ಯಂ. ವೀರೇಶ್, ಕೂಡ್ಲಿಗಿ
*ಪುರಾಣ ಪ್ರಸಿದ್ಧ ಕಥೆಗಳಲ್ಲಿ ಬಹುಪತ್ನಿತ್ವ ಒಪ್ಪಿಗೆಯಿದ್ದರೂ ಪ್ರಸ್ತುತ ಕಾನೂನು ಈ ಬಗ್ಗೆ ವಿರೋಧಿಸುತ್ತದೆ. ಏಕೆ?*
ಬಹುಪತ್ನಿತ್ವದಿಂದ ಉಂಟಾಗಬಹುದಾದ ರಂಪ, ರಾಮಾಯಣ, ಪುರಾಣಗಳನ್ನು ತಪ್ಪಿಸಲು.

ಶಾಂತ ಗೌಡ, ಬೆಂಗಳೂರು
*ಸಾಮಾನ್ಯ ಜನರು ನೋಟಿಗಾಗಿ ಪರದಾಡುತ್ತಿದ್ದಾಗ ಕಂತೆ ಕಂತೆ ನೋಟುಗಳನ್ನು ಇಟ್ಟುಕೊಂಡಿದ್ದವರಿಗೆ ಏನನ್ನಬೇಕು?*
ನಿಮ್ಮ ಕಟ್ಟುಗಳೇ ನಿಮ್ಮ ಚಟ್ಟಕ್ಕೆ ಮೆಟ್ಟಿಲಾಗಲಿ ಎನ್ನಬೇಕು.

ಪಿ.ಜಿ. ರಾಘವೇಂದ್ರ, ಮೈಸೂರು
*ರಾಜಮಹಾರಾಜರ ಹಾಗೆ ರಾಜಕಾರಣಿಗಳೇಕೆ ಬೇಟೆಯಾಡಲು ಕಾಡಿಗೆ ಹೋಗುವುದಿಲ್ಲ?*



ಜೇಡರ ಬಲೆಗೆ ಹುಳುಗಳು ತಾನಾಗಿಯೇ ಬೀಳುತ್ತವೆ.

ವಿ. ಹಮೀದ್, ವಿಟ್ಲ
*ಹೆಣ್ಣು ಅಪ್ಸರೆ; ಗಂಡು...?*
ಆ ಅಪ್ಸರೆಯ ಗುಂಗಿನಲ್ಲೇ ಸೆರೆ.

ಆರತಿ ಘಟಿಕಾರ್, ದುಬೈ
*ಬಿಗ್‌ಬಾಸ್ ಕಾರ್ಯಕ್ರಮ ರಿಯಾಲಿಟಿ ಶೋನಾ ಇಲ್ಲಾ ಕಾಮಿಡಿ ಶೋನಾ?*
ಎರಡೂ ಅಲ್ಲ; ಸುವಿಶ್ರಾಂತರು ಅರೆ ವಿಶ್ರಾಂತರನ್ನು ಕೂಡಿಹಾಕಿ ವಿಶ್ರಾಂತರ ವೀಕ್ಷಣೆಗಾಗಿ ನಡೆಸುವ ಹುಚ್ಚು ಸರ್ಕಸ್.

■ ರಾಮ್